ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಾಂಗ ದಂಡಾಧಿಕಾರಿಗಳವರ ನ್ಯಾಯಾಲಯದಲ್ಲಿ ಃ ಮುಳಬಾಗಿಲು

ಸಿಸಿ ಸಂಖ್ಯೆ.**3424/2024**

| | | |
|---|---|---|
| ಫಿರ್ಯಾದುದಾರರು | ಃ | ರಾಜ್ಯದ ಪರವಾಗಿ ನಗರ ಠಾಣಾ ಆರಕ್ಷಕರು,<br>ಮುಳಬಾಗಿಲು. |
| | -ವಿರುದ್ಧ- | |
| ಆರೋಪಿ | ಃ | ಆನಂದ, 40 ವರ್ಷ,<br>ಬಿನ್ಃ ಯಲ್ಲಪ್ಪ,<br>ಲಾರಿ ಚಾಲಕ,<br>ವಾಸಃ ಬಂಡಹಳ್ಳಿ ಗ್ರಾಮ,<br>ಊರುಕುಂಟೆ ಮಿಟ್ಟೂರು ಅಂಚೆ,<br>ಮುಳಬಾಗಿಲು ತಾಲೂಕು. |

---

ಆಪಾದನಾ ಸಾರ

ದಿನಾಂಕಃ21.03.2024 ರಂದು ಮೃತ- ಶ್ರೀಕಾಂತ್ ಎನ್ನುವವರು ಪಲಮನೇರಿನಲ್ಲಿ ಕೆಲಸ ಮುಗಿಸಿಕೊಂಡು ಆತನ ಬಾಬ್ತು ಎಪಿ-03-ಬಿಎಲ್-5946 ನೋಂದಣಿಯ ದ್ವಿ-ಚಕ್ರ ವಾಹನದಲ್ಲಿ ಆತನ ಊರಾದ ಹರಟಿ ನಾಯಕರಹಳ್ಳಿಗೆ ರಾತ್ರಿ 11.30 ಗಂಟೆಯಲ್ಲಿ ಮುಳಬಾಗಿಲು ಸಮೀಪದ ತಾಯಲೂರು ಬೈ-ಪಾಸ್ ಎನ್.ಹೆಚ್-75 ರಲ್ಲಿ ಹೋಗುತ್ತಿದ್ದಾಗ, ಆರೋಪಿಯಾದ ನೀವು ಕೆಎ-34-ಬಿ-7456 ನೋಂದಣಿಯ ಲಾರಿಗೆ ಯಾವುದೇ ಇಂಡಿಕೇಟರ್ ಸಿಗ್ನಲ್ ಹಾಕದೇ ನಿಮ್ಮ ನಿರ್ಲಕ್ಷತೆಯಿಂದ ರಸ್ತೆಯಲ್ಲಿ ನಿಲ್ಲಿಸಿದ್ದು, ಸದರಿ ಶ್ರೀಕಾಂತ್ ರವರಿಗೆ ಮುಂದೆ ಬರುತ್ತಿದ್ದ ವಾಹನಗಳ ಲೈಟ್ ಬೆಳಕಿನಲ್ಲಿ ನೀವು ನಿಲ್ಲಿಸಿದ್ದ ಲಾರಿ ಕಾಣಿಸದೇ ಸದರಿ ಲಾರಿಗೆ ಡಿಕ್ಕಿ ಹೊಡೆದು, ಅಪಘಾತವುಂಟಾದ ಪರಿಣಾಮ, ಆರೋಪಿಯಾದ ನಿಮ್ಮ ಮೇಲೆ ಭಾ.ದಂ.ಸಂ.ಕಲಂ-**279** ರ ರೀತ್ಯಾ ಆಪಾದನೆ ಹೊರಿಸಲಾಗಿದೆ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ನಿಮ್ಮ ಬಾಬ್ತಿನ ಕೆಎ-34-ಬಿ-7456 ನೋಂದಣಿಯ ಲಾರಿಯನ್ನು ಯಾವುದೇ ಇಂಡಿಕೇಟರ್ ಸಿಗ್ನಲ್

ತೋರದೇ ರಸ್ತೆಯಲ್ಲಿ ನಿಲ್ಲಿಸಿದ್ದರ ಪರಿಣಾಮ, ಮೃತ ಶ್ರೀಕಾಂತ್ ಸದರಿ ಲಾರಿಗೆ ಡಿಕ್ಕಿಪಡಿಸಿದ್ದರ ಪರಿಣಾಮ, ಆತ ಕೆಳಗೆ ಬಿದ್ದು, ತಲೆಗೆ ತೀವ್ರ ಸ್ವರೂಪದ ಗಾಯವುಂಟಾಗಿ ರಸ್ತೆಯಲ್ಲಿಯೇ ಮೃತಪಟ್ಟ ಪರಿಣಾಮ, ಆರೋಪಿಯಾದ ನಿಮ್ಮ ಮೇಲೆ ಭಾ.ದಂ.ಸಂ.ಕಲಂ-**304(ಎ)**ರ ರೀತ್ಯಾ ಆಪಾದನೆ ಹೊರಿಸಲಾಗಿದೆ.

ಪ್ರಶ್ನೆ-1ಃ ಓದಿ ಹೇಳಿದ ಆಪಾದನೆ ತಿಳಿಯಿತೇ?

ಉತ್ತರಃ

ಪ್ರಶ್ನೆ.2ಃ ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಅವರಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ, ಆತ ಕೊಟ್ಟ ಉತ್ತರವನ್ನು ಸ್ವತಃ ನಾನೇ ಬರೆದುಕೊಂಡಿರುವುದಾಗಿ ದೃಢೀಕರಿಸುತ್ತೇನೆ.

ದಿನಾಂಕಃ **22** ನೇ ಆಗಸ್ಟ್, **2025.**

(ಹರೀಶ್ ಜಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಮುಳಬಾಗಿಲು.